ಕ್ರ.ಸಂ.	ವ್ಯಕ್ತಿಗಳ ದರ್ಜೆ	ತೆರಿಗೆ ದರ
2.	ರೂ. 5000/– ಕ್ಕಿಂತ ಜಾಸ್ತಿ ಆದರೆ ರೂ. 8000/– ಕ್ಕಿಂತ ಕಡಿಮೆ	ರೂ. 60/–
3.	ರೂ. 8000/– ಕ್ಕಿಂತ ಜಾಸ್ತಿ ಆದರೆ ರೂ. 10,000/– ಕ್ಕಿಂತ ಕಡಿಮೆ	ರೂ. 100/–
4.	ರೂ. 10,000/– ಕ್ಕಿಂತ ಜಾಸ್ತಿ ಆದರೆ ರೂ. 15000/– ಕ್ಕಿಂತ ಮತ್ತು ಕಡಿಮೆ	ರೂ. 150/–
5.	ರೂ. 15000/– ಕ್ಕಿಂತ ಮತ್ತು ಅದಕ್ಕಿಂತ ಜಾಸ್ತಿ	ರೂ. 200/–

ಆ) ಮಾಹೆಯಾನ ರೂ. 15000/– ಮತ್ತು ಅದಕ್ಕಿಂತ ಜಾಸ್ತಿ ಸಂಬಳ ಅಥವಾ ಕೂಲಿ ಅಥವಾ ಎರಡನ್ನೂ ಸೇರಿ ಪಡೆಯುವವರಿಗೆ ಗರಿಷ್ಟ ರೂ. 200/– ವೃತ್ತಿ ತೆರಿಗೆ ನಿಗದಿಪಡಿಸಲಾಗಿದೆ.

ಇ) ಭಾರತದ ಸಂವಿಧಾನದ ಪ್ರಕಾರ ರಾಜ್ಯ ಸರ್ಕಾರ ಪ್ರತಿ ವರ್ಷ ರೂ. 2500/– ಗಳಿಗಿಂತ ಹೆಚ್ಚಿನ ವೃತ್ತಿ ತೆರಿಗೆಯನ್ನು ವಿಧಿಸಲು ಅಧಿಕಾರ ಹೊಂದಿರುವುದಿಲ್ಲ.

ಮಲೆನಾಡು ಪ್ರದೇಶದಲ್ಲಿ ಸಿ ಅಂಡ್ ಡಿ ಭೂಮಿಯನ್ನು ವರ್ಗೀಕರಿಸುವುದು

217 (165) ಶ್ರೀ ಕುಮಾರಸ್ವಾಮಿ ಎಂ.ಪಿ. (ಮೂಡಿಗೆರೆ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಲೆನಾಡು ಪ್ರದೇಶದಲ್ಲಿ ಸಿ ಮತ್ತು ಡಿ ಭೂಮಿಯನ್ನು ವರ್ಗೀಕರಿಸಿರುವುದು ನಿಜವೇ;

ಆ) ಈ ಭೂಮಿಯನ್ನು ಯಾವ ಆಧಾರದ ಮೇಲೆ ವರ್ಗೀಕರಣ ಮಾಡಲಾಗಿದೆ;

ಇ) ಈ ಭೂಮಿಯು ಮೊದಲು ಯಾವ ಇಲಾಖೆಗೆ ಒಳಪಟ್ಟಿತ್ತು (ವಿವರಗಳನ್ನು ನೀಡುವುದು)?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಹೌದು.

ಆ) ಸರ್ಕಾರದ ಕೃಷಿ ಮತ್ತು ಭೂ ದಾಖಲೆಗಳ ಇಲಾಖೆವತಿಯಿಂದ ಮಣ್ಣಿನ ಫಲವತ್ತತ್ತೆ ಆಧಾರಿಸಿ ಕೃಷಿ ಯೋಗ್ಯವಲ್ಲದ ಜಮೀನನ್ನು ಸಿ ಮತ್ತು ಡಿ ವರ್ಗದ ಜಮೀನೆಂದು ವರ್ಗೀಕರಿಸಲಾಗಿದೆ.

ಇ) ಈ ಜಮೀನುಗಳು ಗೋಮಾಳ, ಸೊಪ್ಪಿನ ಬೆಟ್ಟ, ಹುಲ್ಲುಬನ್ನಿ, ಖಿರಾಬು ವರ್ಗಕ್ಕೆ ಸೇರಿದ ಕಂದಾಯ ಇಲಾಖೆಯ ವ್ಯಾಪ್ತಿಗೆ ಒಳಪಡುವ ಭೂಮಿಗಳಾಗಿದ್ದವು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವುದು

218 (169) ಶ್ರೀ ಕುಮಾರಸ್ವಾಮಿ ಎಂ.ಪಿ. (ಮೂಡಿಗೆರೆ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಿನಾಂಕ 8–6–2002ರಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿನ ಶೃಂಗೇರಿ, ಮೂಡಿಗೆರೆ ಹಾಗೂ ಚಿಕ್ಕಮಗಳೂರು ತಾಲ್ಲೂಕುಗಳ ಸುಮಾರು 1,28,000 ಎಕರೆ ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಗೆ ಹಸ್ತಾಂತರ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ಭೂಮಿಯನ್ನು ಪುನಃ ಕಂದಾಯ ಇಲಾಖೆಗೆ ಹಸ್ತಾಂತರ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ; (ವಿವರಗಳನ್ನು ನೀಡುವುದು)?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)